155-72-88

# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕುಶಾಲಪ್ಪ ಎಂ ಪಿ (ಸುಜಾ) ಇವರು ನಿಯಮ 72ರಡಿ ಗಮನ ಸೆಳೆಯುವ ಸೂಚನೆಗೆ ಹೇಳಿಕೆ

**ಪ್ರಶ್ನೆ:-**

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಬೇತೂರು ಗ್ರಾಮದಲ್ಲಿ ಪ್ರಸ್ತುತ ಇರುವ ಶುದ್ಧ ನೀರು ಘಟಕದ ಸೂಕ್ತ ನಿರ್ವಹಣೆ ಇಲ್ಲದೆ ಶಾಲಾ ಮಕ್ಕಳು ಹಾಗೂ ಗ್ರಾಮಸ್ಥರು ಅಕ್ಕ-ಪಕ್ಕದ ಹಳ್ಳಿಗಳಿಗೆ ಕುಡಿಯುವ ನೀರಿಗಾಗಿ ಪರದಾಡುವಂತಾಗಿರುತ್ತದೆ ಹಾಗೂ ಶ್ರೀ ಬೇವಿನಹಳ್ಳಮ್ಮ ದೇವಸ್ಥಾನಕ್ಕೆ ಪ್ರತಿ ನಿತ್ಯ ಅಗಮಿಸುವ ನೂರಾರು ಭಕ್ತರುಗಳಿಗೆ ಅನುಕೂಲವಾಗುವಂತೆ ಬೇತೂರು ಪಾಳ್ಯ ಗ್ರಾಮದ ರಸ್ತೆ, ಭಾಗದಲ್ಲಿ ಹೆಚ್ಚುವರಿ ಕುಡಿಯಲು ಶುದ್ಧ ನೀರು ಘಟಕವನ್ನು ನಿರ್ಮಿಸಲು ಶೀಘ್ರವಾಗಿ ಕ್ರಮವಹಿಸಿ ಅನುಕೂಲ ಮಾಡುವ ಬಗ್ಗೆ.

ಮುಂದುವರೆದು, ಬೇತೂರು ಗ್ರಾಮದಲ್ಲಿರುವ ಕೆರೆಯ ಹೂಳೆತ್ತುವ ಕಾರ್ಯವನ್ನು ನಿರ್ವಹಿಸದೆ ಕೆರೆ ನೀರು ಸಂಗ್ರಹಣೆ ಮಾಡಲು ಸಂಪೂರ್ಣವಾಗಿ ಹಾಳಾಗಿ ಬತ್ತಿಹೋಗುತ್ತಿರುವುದನ್ನು ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳುವುದರ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಹೇಳಿಕೆ:-**

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಬೇತೂರು ಗ್ರಾಮದಲ್ಲಿ 1000 LPH ಸಾಮರ್ಥ್ಯದ 02 ಶುದ್ಧ ಕುಡಿಯುವ ನೀರನ ಘಟಕಗಳಿರುತ್ತವೆ. ಒಂದು ಶುದ್ಧ ಕುಡಿಯುವ ನೀರಿನ ಘಟಕವನ್ನು ಸುಸ್ಥಿತಿಯಲ್ಲಿಟ್ಟು ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಲಾಗಿದ್ದು, ಗ್ರಾಮ ಪಂಚಾಯಿತಿ ವತಿಯಿಂದ ನಿರ್ವಹಣೆ ಮಾಡಿ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಮತ್ತೊಂದು ಶುದ್ಧ ಕುಡಿಯುವ ನೀರಿನ ಘಟಕವು ದುರಸ್ಥಿಯಲ್ಲಿದ್ದು, ಸುಸ್ಥಿರಗೊಳಿಸಿ ಗ್ರಾಮ ಪಂಚಾಯತಿಗೆ ಹಸ್ತಾಂತರಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಬೇತೂರು ಪಾಳ್ಯ ಗ್ರಾಮದ ಶ್ರೀ ಬೇವಿನ ಹಳ್ಳಮ್ಮ ದೇವಸ್ಥಾನಕ್ಕೆ ಸಂಬಂದಿಸಿದಂತೆ ಬೇತೂರು ಪಾಳ್ಯದಲ್ಲಿ 1000 LPH ಸಾಮರ್ಥ್ಯದ ಒಂದು ಶುದ್ಧ ಕುಡಿಯುವ ನೀರಿನ ಘಟಕವು ಕಾರ್ಯನಿರ್ವಹಿಸಿದ್ದು, ಸದರಿ ಘಟಕದಿಂದ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಹೊಸದಾಗಿ ಶುದ್ಧ ಕುಡಿಯುವ ನೀರು ಘಟಕವನ್ನು ಈ ಇಲಾಖೆಯಿಂದ ನಿರ್ಮಿಸಲು ಸದ್ಯಕ್ಕೆ ಪ್ರಸ್ತಾಪ ಇರುವುದಿಲ್ಲ.

ಮುಂದುವರೆದು, ಬೇತೂರು ಗ್ರಾಮದ ಕೆರೆ ಹೂಳೆತ್ತುವ ಕಾಮಗಾರಿಗೆ ಸಂಬಂಧಿಸಿದಂತೆ, ಸದರಿ ಕೆರೆಯು ಸುಮಾರು 272 ಎಕರೆ ವಿಸ್ತೀರ್ಣಹೊಂದಿದ್ದು, ಸದರಿ ಕೆರೆಯು ಸಣ್ಣ ನೀರಾವರಿ ಇಲಾಖೆಗೆ ಒಳಪಟ್ಟಿರುತ್ತದೆ.

ಈಗಾಗಲೇ ನರೇಗಾ ಯೋಜನೆಯಡಿ 2022-23 ನೇ ಸಾಲಿನಲ್ಲಿ ಈ ಕೆಳಕಂಡಂತೆ ಕೆರೆಕೋಡಿ ಅಭಿವೃದ್ಧಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಕಾಮಗಾರಿಯ ಹೆಸರು | ಕಾಮಗಾರಿಯ ಸಂಕೇತ | ಅಂದಾಜು ಮೊತ್ತ | ಭರಿಸಿದ ಮೊತ್ತ | ಷರಾ |
|---|---|---|---|---|---|
| 1 | ಬೇತೂರು ಗ್ರಾಮದ ಕೆರೆಯ ಸಮಗ್ರ ಅಭಿವೃದ್ಧಿ | 1510003014/WC/9 3393042892511193 | 10.00 | 9.84 | 84 ಕೆರೆ ಕೋಡಿ ಅಭಿವೃದ್ಧಿ ಕಾಮಗಾರಿ ನಿರ್ವಹಿಸಲಾಗಿದೆ. |

ನರೇಗಾ ಯೋಜನೆಯಡಿ 2024-25 & 2025-26 ಆರ್ಥಿಕ ವರ್ಷದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಅಭಿವೃದ್ಧಿಪಡಿಸಲು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿಕೊಳ್ಳಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಕಾಮಗಾರಿಯ ವಿವರ | ಅಂದಾಜು ಅಳತೆ (Meter) | ಬೇಕಾಗಿರುವ ಅಂದಾಜು ಮೊತ್ತ |
|---|---|---|---|
| 1 | ಕೆರೆ ಏರಿ ಅಭಿವೃದ್ಧಿ | 1500 m | 25.00 |
| 2 | ಕೆರೆ ಹೂಳು ತೆಗೆಯುವುದು | 30m | 45.00 |
| 3 | ಕೆರೆ ಕಾಲುವೆ ಅಭಿವೃದ್ಧಿ | 4000 m | 20.00 |

ಈ ಮೇಲ್ಕಂಡ ಪಟ್ಟಿಯಲ್ಲಿರುವ ಕಾಮಗಾರಿಗಳನ್ನು ನರೇಗಾ ಯೋಜನೆಯಡಿ ವಾರ್ಷಿಕ ಗುರಿ ಹಾಗೂ ನರೇಗಾ ಮಾರ್ಗಸೂಚಿ ಅನುಗುಣವಾಗಿ ನಿರ್ವಹಿಸಲು ಸಂಬಂಧಪಟ್ಟ ತಾಲ್ಲೂಕು ನೋಡಲ್ ಅಧಿಕಾರಿ ರವರಿಗೆ ನಿರ್ದೇಶನ ನೀಡಲಾಗಿದೆ, ಮುಂದುವರೆದು, ಸದರಿ ಕೆರೆಯು ಸಣ್ಣ ನೀರಾವರಿ ಇಲಾಖೆಗೆ ಸಂಬಂಧಿಸಿದಾಗಿದ್ದು, 272 ಎಕರೆ ವಿಸ್ತೀರ್ಣ ಹೊಂದಿದ್ದು, ಸದರಿ ಕೆರೆಯನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲು ಹೆಚ್ಚಿನ ಅನುದಾನದ ಅವಶ್ಯಕತೆ ಇರುವುದರಿಂದ, ಸಣ್ಣ ನೀರಾವರಿ ಇಲಾಖೆಯಿಂದ ಅನುಷ್ಠಾನಗೊಳಿಸಬಹುದಾಗಿದೆ.

(ಪ್ರಿಯಾಂಕ್ ಖರ್ಗೆ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

ಗ್ರಾಕುನೀ&ನೈಇ/ಮುಇಂ/ತಾಂತ್ರಿಕ/166/2024-25